ಆ) ಹಾಗಿದ್ದಲ್ಲಿ, ರಾಜ್ಯದ ಗಡಿಯ ನಂಗಲಿ ಪಕ್ಕಿರದಲ್ಲಿರುವ ತನಿಖಾ ಠಾಣೆಯು ಸೂಕ್ತವಾದ ಸ್ಥಳವಾಗಿದ್ದರೂ ಸಹ ಅದಕ್ಕೆ ಬದಲಾಗಿ ಈ ಮೇಲಿನ ಸ್ಥಳವನ್ನು ಆಯ್ದುಕೊಳ್ಳಲು ಬಲವತ್ತರವಾದ ಕಾರಣಗಳಿವೆಯೇ ?

ಇ) ರಾಜ್ಯ ಸರಹದ್ದಿನ ಹತ್ತಿರವಿರುವ ನಂಗಲಿ ಮತ್ತು ಪುಂಗನೂರು ಸ್ಥಳಗಳಲ್ಲಿ ಎರಡೂ ತನಿಖಾ ಠಾಣೆಗಳನ್ನು ತೆರೆಯಲು ಸರ್ಕಾರವು ಪರಿಗಣಿಸುವುದೇ ?

ಶ್ರೀ ಎಂ. ರಾಜಶೇಖರಮೂರ್ತಿ (ಹಣಕಾಸು ಮಂತ್ರಿಗಳು).—

ಆ) ಹೌದು.

ಆ) ಕೋಲಾರ ಜಿಲ್ಲೆಯ ಅನೇಕ ಸ್ಥಳಗಳಿಂದ ಆಂಧ್ರಪ್ರದೇಶಕ್ಕೆ ವರ್ಷವಿಡೀ ಹೆಚ್ಚಿನ ಸಂಖ್ಯೆಯಲ್ಲಿ ಭತ್ತ, ಅಕ್ಕಿ, ಬೆಲ್ಲ, ಇತ್ಯಾದಿ ಸರಕುಗಳ ಸಾಗಣೆಯನ್ನು ತಡೆಯುವ ಸಲುವಾಗಿ ಮತ್ತು ಅಕ್ರಮವಾಗಿ ವಸ್ತುಗಳ ಸಾಗಾಣಿಕೆ ಮಾಡುವುದನ್ನು ತಡೆಯುವುದಕ್ಕಾಗಿ ಹಾಗೂ ನಿಯಮಗಳಿಗನುಸಾರ ತೆರಿಗೆಯನ್ನು ವಿಧಿಸುವ ಸಲುವಾಗಿ ಪಡ್ಡರ ಹಳ್ಳಿಗೆ ಬದಲಾಗಿ ನಂಗಲಿಯು ಬಳಿ ತನಿಖಾ ಠಾಣೆಯನ್ನು ತೆರೆಯಲಾಗಿದೆ.

ಇ) ಇಲ್ಲ.

ಶ್ರೀ ಎಂ. ವಿ. ವೆಂಕಟಪ್ಪ.—ಸ್ವಾಮಿ, ಚೆಕ್‌ಪೋಸ್ಟ್‌ಗಳಲ್ಲಿ ಏನಾಗಿದೆ ಅಂದರೆ, ಲಾರಿಗಳನ್ನು ನಿಲ್ಲಿಸಿ, ಹಣ ತೆಗೆದುಕೊಂಡು ರಸೀದಿ ಕೊಡದೇ ಬಿಡುತ್ತಾರೆ. ಒಂದು ಲಾರಿಗೆ ೧೦೦–೨೦೦ ತೆಗೆದುಕೊಳ್ಳುತ್ತಾರೆ ಚೆಕ್‌ಪೋಸ್ಟ್‌ಗಳಲ್ಲಿ ಕೆಲಸ ಮಾಡುವವರ ಮೇಲೆ ಚೆಕಿಂಗ್ ಏನಾದರೂ ಇಡುವಂಥ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಎಂ. ರಾಜಶೇಖರ ಮೂರ್ತಿ.—ಸ್ವಾಮಿ, ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರ ಒದಗಿಸಿದ್ದೇನೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ವಿ. ವಿ. ವೆಂಕಟಪ್ಪ.—ಅಗಬಹುದು, ಪಡ್ಡಹಳ್ಳಿಯ ಹತ್ತಿರ ಚೆಕ್‌ಪೋಸ್ಟ್ ಮಾಡುವ ವಿಚಾರದ ಬಗ್ಗೆ ಏನು ಹೇಳಂತ್ತೀರಿ ? ಅಂತೆ ರಾಜ್ಯದ ಗಡಿ ಪ್ರದೇಶಗಳಾದ ನಂಗಲಿ ಮತ್ತು ಪುಂಗನೂರಿನಲ್ಲಿ ಉಕ್ಕಡ ಕಛೇರಿಗಳನ್ನು ತೆರೆಯಲು ಯೋಚಿಸಿದ್ದೀರಾ ?

ಶ್ರೀ ಎಂ. ರಾಜಶೇಖರ ಮೂರ್ತಿ.—ಇನ್ನೂ ಮಾಡಿಲ್ಲ, ತಾವು ಹೇಳಿರತಕ್ಕ ಎರಡೂ ಸ್ಥಳಗಳಲ್ಲಿ ಲಾರಿಗಳ ಮೂವ್‌ಮೆಂಟ್ ಎಷ್ಟಿದೆ ನೋಡಿಕೊಂಡು, ಅವಶ್ಯಕತೆ ಇದ್ದರೆ ಉಕ್ಕಡ ಕಛೇರಿಗಳನ್ನು ತೆರೆಯುತ್ತೇವೆ.

ಶ್ರೀ ಎಂ. ವಿ. ವೆಂಕಟಪ್ಪ.—ಇದು ನ್ಯಾಷನಲ್ ಹೈವೇ ಇದ್ದು ಬಹಳ ಟ್ರಾಫಿಕ್ ಇರುತ್ತದೆ. ೪–೫ ಆಕ್ಸಿಡೆಂಟುಗಳಲ್ಲಿ ೭–೮ ಜನ ಸತ್ತು ಹೋಗಿದ್ದಾರೆ. ರಸ್ತೆ ಸೈಡಿನಲ್ಲಿ ಈ ಕಛೇರಿಯನ್ನು ಹಾಕಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

SRI M. RAJASHEKARA MURTHY.—That will be examined.

ಬೆಂಗಳೂರಿನ ಹೊರವಲಯಕ್ಕೆ ರೇಸ್ ಕೋರ್ಸ್‌ನ ಸ್ಥಳಾಂತರ

*೫೫. ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಹಣಕಾಸು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ) ಬೆಂಗಳೂರು ರೇಸ್‌ಕೋರ್ಸನ್ನು ಈಗಿರುವ ಸ್ಥಳದಿಂದ ಬೆಂಗಳೂರು ನಗರದ ಹೊರವಲಯಕ್ಕೆ ಸ್ಥಳಾಂತರಿಸಲು ಸರ್ಕಾರವು ತೀರ್ಮಾನ ತೆಗೆದುಕೊಂಡಿದೆಯೆ ?

ಆ) ಹಾಗಿಲ್ಲದಿದ್ದಲ್ಲಿ, ಈ ರೇಸಕೋರ್ಸನ್ನು ಸ್ಥಳಾಂತರಿಸುವ ಮತ್ತು ಆ ಸ್ಥಳವನ್ನು ಮಕ್ಕಳ ಮನರಂಜನಾ ಉದ್ಯಾನವನವನ್ನಾಗಿ ಪರಿವರ್ತಿಸುವ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ?

ಶ್ರೀ ಎಂ. ರಾಜಶೇಖರ ಮೂರ್ತಿ (ಹಣಕಾಸು ಮಂತ್ರಿಗಳು).—

ಆ) ಸರ್ಕಾರ ನಿರ್ಧರಿಸಲ್ಲಿ ರೇಸಕೋರ್ಸನ್ನು ಸ್ಥಳಾಂತರಿಸಲು ತೀರ್ಮಾನಿಸಿದೆ.

ಆ) ರೇಸ್‌ಕೋರ್ಸನ್ನು ಸ್ಥಳಾಂತರಿಸಿದಲ್ಲಿ, ಆ ಪ್ರದೇಶದ ಉಪಯೋಗದ ಬಗ್ಗೆ ಸರ್ಕಾರ ಪರಿಶೀಲಿಸುವುದು.

ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ.—ರೇಸಕೋರ್ಸನ್ನು ಶಿಫ್ಟ್ ಮಾಡುವ ಬಗ್ಗೆ ೧೯೮೨ರಲ್ಲಿ ನಿರ್ಣಯ ತೆಗೆದುಕೊಂಡಿದ್ದರೂ ೯೦ನೇ ಇಸವಿ ಬಂದರೂ ಇದುವರೆಗೆ ಏತಕ್ಕೆ ಇದನ್ನು ಶಿಫ್ಟ್ ಮಾಡಲಿಲ್ಲ. ಯಲಹಂಕಕ್ಕೆ ಶಿಫ್ಟ್ ಮಾಡುವ ಬಗ್ಗೆ ಸರ್ಕಾರ ನಿರ್ಣಯ ತೆಗೆದುಕೊಂಡಿತ್ತು, ಇದರ ಹಿಂದೆ ಬಹಳಷ್ಟು ಪ್ರಭಾವಿ ಶಾಲಿಗಳು ಇದ್ದಾರೆ. ಅವರಿಗೆ ಆಸ್ಪದ ಕೊಡದೆ ರೇಸ್‌ಕೋರ್ಸನ್ನು ಬೆಂಗಳೂರು ನಗರದಿಂದ ಹೊರಗಡೆ ಹಾಕಿದರೆ ಬಹಳಷ್ಟು ಸಂಸಾರಗಳು ಉದ್ಧಾರವಾಗುತ್ತವೆ. ಇದರಿಂದ ಬಹಳಷ್ಟು ಮನೆಗಳು ಹಾಳಾಗಿ ಹೋಗಿವೆ.

ಅಧ್ಯಕ್ಷರು.—ಪ್ರಶ್ನೆ ಕೇಳಿ.

ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ.—ರೇಸಕೋರ್ಸ್ ಯಾವಾಗ ಶಿಫ್ಟ್ ಮಾಡುತ್ತೀರಾ ಎಂದು ಕೇಳುತ್ತೇನೆ.

SRI M. RAJASHEKHARA MURTHY.—The whole matter requires re-examination.

ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ.—ರೇಸಕೋರ್ಸನ್ನು ಸರ್ಕಾರ ಶಿಫ್ಟ್ ಮಾಡಿ, ಆ ಜಾಗದಲ್ಲಿ ಮಕ್ಕಳ ಮನರಂಜನಾ ಉದ್ಯಾನವನ, ೨೫% ಸಿಟಿ ಬಸ್ ಟರ್ಮಿನಲ್ ಮಾಡಿದರೆ 25% parking slot, ಬೆಂಗಳೂರಿನ ಜನತೆಗೆ ಒಳ್ಳೆಯದಾಗುತ್ತದೆ. ಇದರ ಬಗ್ಗೆ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳುತ್ತೇನೆ.

SRI M. RAJASHEKARA MURTHY.—This question arises only when the Government re-examined the whole question and taken a decision.

ಶ್ರೀ ವಾಟಾಳ್ ನಾಗರಾಜ್.—ಅವರು ಕನ್ನಡ, ನೀವು ಇಂಗ್ಲೀಷ್.

ಮಾಲೂರಿನಲ್ಲಿ ಕ.ರಾ.ರ.ಸಾ. ಸಂಸ್ಥೆಯ ಡಿಪೋದ ನಿರ್ಮಾಣ

೨೨೫. ಶ್ರೀ ಎ. ನಾಗರಾಜು (ಮಾಲೂರು).—ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಾಲೂರಿನಲ್ಲಿ ಕೆ.ಎಸ್.ಆರ್.ಟಿ.ಸಿ. ಡಿಪೋ ಕಟ್ಟುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ?

ಆ) ಹಾಗಿದ್ದಲ್ಲಿ ಯಾವಾಗ ಕಟ್ಟಡದ ಕೆಲಸ ಪ್ರಾರಂಭವಾಗುವುದು ಮತ್ತು ಪೂರ್ತಿಗೊಳ್ಳುವುದು?

ಶ್ರೀ ಕೆ. ಜೆ. ಜಾರ್ಜ್ (ಆಹಾರ, ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಸಚಿವರು).—

ಅ) ಸಧ್ಯಕ್ಕೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಎ. ನಾಗರಾಜು.—ಸ್ವಾಮಿ, ನನ್ನ ಮೊದಲನೆಯ ಪ್ರಶ್ನೆಗೆ ಮಂತ್ರಿಗಳು 'ಇಲ್ಲ' ಎಂದು ಹೇಳಿದ್ದಾರೆ. ಮಾನ್ಯ ಸಚಿವರು ಮಾಲೂರಿಗೆ ಬಂದಾಗ ಸ್ಥಳಪರೀಲನೆ ಮಾಡಿ ಬಂದಿರುವುದು ಕೂಡ ಪತ್ರಿಕೆಗಳಲ್ಲಿ ಬಂದಿತ್ತು. ಮಾಲೂರಿನಲ್ಲಿ ಕೆ.ಎಸ್.ಆರ್.ಟಿ.ಸಿ. ಡಿಪೋ ಆಗುತ್ತದೆ ಎಂದು ಜನರಿಗೆ ಆಶ್ವಾಸನೆ ಕೊಟ್ಟಿ ಬಂದಿದ್ದಾರೆ. ಆದರೆ, ಉತ್ತರದಲ್ಲಿ ಸಧ್ಯಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಮುಂದಿನ ಹಣಕಾಸಿನ ವರ್ಷದಲ್ಲಿ ಮಾಲೂರಿಗೆ ಒಂದು ಡಿಪೋ ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಜೆ. ಜಾರ್ಜ್,—ಮುಂದೆ, ಮಾಲೂರಿನಲ್ಲಿ ಕೆ. ಎಸ್. ಆರ್. ಟಿ. ಸಿ. ಡಿಪೋಗೆ ಜಾಗ ಬೇಕಾಗಬಹುದೆಂದು, ೧೦ ಎಕರೆ ಜಾಗ ನೋಡಲು ಜಿಲ್ಲಾಧಿಕಾರಿಗಳಿಗೆ, ಮತ್ತು ಡಿವಿಜನಲ್ ಕಂಟ್ರೋಲರಿಗೆ ಆದೇಶ ಕೊಟ್ಟಿದ್ದೇವೆ. ಈಗ ಸಂಸ್ಥೆಯ ಆರ್ಥಿಕ ಪರಿಸ್ಥಿತಿ ಕಷ್ಟದಲ್ಲಿದೆ, ಮುಂದೆ ಸುಧಾರಿಸಿದ ಮೇಲೆ ಆದ್ಯತೆ ಮೇಲೆ ಕೊಡುವುದಕ್ಕೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.